ದಿನಾಂಕ:26/07/2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಎದುರುದಾರರ ಪರಃ ಶ್ರೀ ಎಸ್.ಆರ್.ಪಿ. ವಕೀಲರಿಂದಃ–**

1. ಈ ದಿನ ನಾನು ಮುಖ್ಯ ವಿಚಾರಣೆಯಾಗಿ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳೆಲ್ಲಾ ಸತ್ಯವಾಗಿರುತ್ತವೆ. ಅದರ ಮೇಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಇಂದು ಹಾಜರುಪಡಿಸಿದ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಗೊಳಿಸಲಾಯಿತು.

| | | |
|---|---|---|
| Ex.R. 1 | - | Noting Sheet (In 5 pages), |
| Ex.R. 2 | - | Reporters report (In 5 pages), |
| Ex.R. 3 | - | Accusation letter, |
| Ex.R. 4 | - | Conductors rout letter (Way Bill), |
| Ex.R. 5 | - | Statement of driver C.H.Bandivaddar, |
| Ex.R. 6 | - | Statement of driver Conteppanavar, |
| Ex.R. 7 | - | Statement of Gulalakayi, |
| Ex.R. 8 | - | Conductor Way Bill with annexed with tickets (in one set), |
| Ex.R. 9 | - | Carbon copy of Preliminary suspension order, |
| Ex.R. 10 | - | Defence statement of claimant, |
| Ex.R. 11 | - | Carbon copy of fine receipt, |
| Ex.R. 12 | - | Charge-sheet, |
| Ex.R. 13 | - | Carbon copy of Enquiry Officer appointment letter, |
| Ex.R. 14 | - | Preliminary Enquiry Report, |
| Ex.R. 15 to 17 | - | Enquiry Notices, |
| Ex.R. 18 | - | Carbon copy of Enquiry Proceedings Sheet, |
| Ex.R. 19 | - | X examination of reporter made for complainant, |
| Ex.R. 20 | - | Carbon copy of Claimant's explanation, |

| | | |
|---|---|---|
| Ex.R. 21 | - | Claimant's letter appointing his colleague for assistance in the enquiry proceedings, |
| Ex.R. 22 | - | Enquiry findings, |
| Ex.R. 23 | - | Notice issued to claimant/petitioner, |
| Ex.R. 24 | - | Show-cause notice issued to claimant/petitioner, |
| Ex.R. 25 | - | Dismissal Order of Disciplinary Authority annexed with xerox copy of cheque towards one month salary of the claimant, |
| Ex.R. 26 | - | Covering letter with reference to dismissal order to claimant, |
| Ex.R. 27 & 28 | - | Postal acknowledgements, |
| Ex.R. 29 | - | Defence statement of the claimant with annexures, |
| Ex.R. 30 | - | Certified Copy of the Order of Industrial Tribunal in Sl. A. No.356/2017, |

2. ಅರ್ಜಿದಾರರಿಗೆ ಯೋಗ್ಯ ಅವಕಾಶ ನೀಡಿ, ಸದರಿ ದಾಖಲೆಗಳ ಅನ್ವಯ ಅವನನ್ನು ವಜಾಗೊಳಿಸಿರುವುದು ಉರ್ಜಿತವಾಗಿರುತ್ತದೆ. ಆದ್ದರಿಂದ ಅರ್ಜಿದಾರನ ಅರ್ಜಿಯನ್ನು ವಜಾಗೊಳಿಸ ಬೇಕೆಂದು ಕೋರುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರಃ ಅರ್ಜಿದಾರರು ಹಾಗೂ ಅವರ ಪರ ವಕೀಲರನ್ನು ಕರೆಸಲಾಗಿ ಗೈರು ಹಾಜರಿದ್ದಾರೆ. ಆದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)*

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.

ದಿನಾಂಕ:05/07/2022 ರಂದು ಸಾಕ್ಷಿಯನ್ನು ಪಾಟೀ ಸವಾಲಿಗಾಗಿ ಮರಳಿ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ಕೆ.ಸಿ.ಪಿ. ವಕೀಲರಿಂದಃ –</u>**

3. ನಾನು ಕಳೆದ 24 ವರ್ಷಗಳಿಂದ ಎದುರುದಾರ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈಗ ನಾನು ಲೆಕ್ಕಪತ್ರ ಅಧೀಕ್ಷಕನಾಗಿರುತ್ತೇನೆ. ನಿ.ಆರ್-12 ಇದು ಅರ್ಜಿದಾರರಿಗೆ ವಿಚಾರಣಾ ತಿಳುವಳಿಕೆ ಪತ್ರ ಕಳಿಸಿರುವ ಕುರಿತಾದ ಅಂಚೆ ಸ್ವೀಕೃತಿ ಪತ್ರ ಆಗಿರುತ್ತದೆ. ನಿ.ಆರ್-7 ನ್ನು ಯಾವುದಕ್ಕೋಸ್ಕರ ಕಳಿಸಿದ್ದರ ಬಗ್ಗೆ ಅಂಚೆ ಸ್ವೀಕೃತಿ ಪತ್ರ ಆಗಿರುತ್ತದೆ ಅಂತಾ ಈಗ ಹೇಳಲು ಬರುವುದಿಲ್ಲ. ನಿ.ಆರ್-12 ವಿಚಾರಣಾ ತಿಳುವಳಿಕೆ ಪತ್ರ ಕಳಿಸಿರುವ ಕುರಿತಾದ ಅಂಚೆ ಸ್ವೀಕೃತಿ ಪತ್ರ ಆಗಿರುತ್ತದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ವಿಚಾರಣಾ ನೋಟೀಸ್ ಪ್ರಕಟಣೆಯ ಕುರಿತಾದ ದಿನಪತ್ರಿಕೆಯ ಮೂಲಪ್ರತಿ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಾವು ವಿಚಾರಣಾ ದಿನಾಂಕ ಕುರಿತು ದಿನಪತ್ರಿಕೆಯ ಪ್ರಕಟಣೆಯನ್ನು ಹೊರಡಿಸಿಲ್ಲ ಅಂದರೆ ಸರಿಯಲ್ಲ. ವಿಚಾರಣೆಯನ್ನು ದಿನಾಂಕ:21/04/2014 ಕ್ಕೆ ಪ್ರಾರಂಭಿಸಿ 20/06/2014 ರಂದು ಮುಕ್ತಾಯಗೊಳಿಸಿರುತ್ತೇವೆ. ಈ ಪ್ರಕ್ರಿಯೆ ಕುರಿತಾದ ದಾಖಲೆಗಳನ್ನು ಹಾಜರು ಪಡಿಸಿದ್ದೇವೆ. ಸದರಿ ಪ್ರಕ್ರಿಯೆಯ ಪ್ರಾರಂಭದಿಂದ ಮುಕ್ತಾಯಗೊಳ್ಳುವ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ನಿ.ಆರ್-14(ಪ್ರಿಲಿಮನರಿ ಸ್ಟೇಟಮೆಂಟ್)ನ್ನು ಒಂದೇ ದಿನದಲ್ಲಿ ತಯಾರಿಸಿದ ದಾಖಲೆ ಅಂದರೆ ಸರಿ. ನಾನು ಸದರಿ ವಿಚಾರಣಾ ಪ್ರಕ್ರಿಯೆಯನ್ನು "ಸಿ ಅಂಡ್ ಡಿ ರೆಗ್ಯೂಲೆಷನ್ ಆಫ್ ಕಾರ್ಪೊರೇಶನ್" ರ ಮೇರೆಗೆ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಮೃತ ಅರ್ಜಿದಾರ ಅಮಾಯಕ ಮತ್ತು ಆತ ಯಾವುದೇ ತಪ್ಪುಮಾಡಿರುವುದಿಲ್ಲ ಮತ್ತು ವಿಚಾರಣಾ ಕಾಲಕ್ಕೆ ಕೂಡ ಆತ ಯಾವುದೇ ತಪ್ಪು ಮಾಡಿಲ್ಲ ಅಂತಾ ಕಂಡುಬಂದರೂ ಸಹಿತ, ಆತನ ವಿರುದ್ಧ ಸುಳ್ಳು ವರದಿಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಆತನಿಗೆ ಸರಿಯಾದ ವಿಚಾರಣಾ ಅವಕಾಶ ನೀಡದೇ, ಆತುರಾತುರವಾಗಿ ಪ್ರಕ್ರಿಯೆ ಜರುಗಿಸಿ ವರದಿ ನೀಡಿರುತ್ತೇನೆ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳನ್ನು ಮೆಚ್ಚಿಸುವ ಸಲುವಾಗಿ ಮೃತ ಅರ್ಜಿದಾರನ ವಿರುದ್ಧ ತಪ್ಪು ವರದಿಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.